# ವೈದ್ಯಕ್ಕೆ ಬೆನ್ನು ಮಾಡಿದ ನಿರ್ದೇಶಕ



ಸಂದೀಪ್ ರೆಡ್ಡಿ ವಂಗ ಧಾರವಾಡದ ಕಾಲೇಜಿನಲ್ಲಿ ಫಿಸಿಯೊಥೆರಪಿ ಕಲಿಯಲು ಹೊರಟಿದ್ದರು. ತಲೆ ತುಂಬ ಸಿನಿಮಾ ಗೀಳು. ಆಸ್ಟ್ರೇಲಿಯಾದಲ್ಲಿ ವ್ಯವಸ್ಥಿತವಾಗಿ ಸಿನಿಮಾ ಕುರಿತು ಕಲಿತು ಬಂದ ಅವರು ನಾಗಾರ್ಜುನ ಅಭಿನಯದ ತೆಲುಗು ಚಿತ್ರವೊಂದಕ್ಕೆ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದರು. ನಾಲ್ಕು ವರ್ಷ ಅವರು ಹೆಣೆದು, ತಿದ್ದಿದ ಕಥೆ 'ಅರ್ಜುನ್ ರೆಡ್ಡಿ'. ಬರೆಯುವಾಗ ಅಲ್ಲು ಅರ್ಜುನ್ ಈ ಪಾತ್ರ ಮಾಡಿದರೆ ಚೆನ್ನಾಗಿರುತ್ತದೆ ಎಂದು ಅವರಿಗೆ ಅನ್ನಿಸಿತ್ತು. ಅದು ಆಗದೇಹೋದಾಗ ಅವರು ಅನೇಕ ನಿರ್ಮಾಪಕರಲ್ಲಿ ಕಥಾಎಳೆ ಹೇಳಿದರು. ಯಾರೂ ಹಣ ವಿನಿಯೋಗಿಸಲು ಮುಂದೆ ಬರಲಿಲ್ಲ. ಆಗ ತಮ್ಮ ಅಪ್ಪ–ಅಣ್ಣನ ಮನವೊಲಿಸಿ ಸಿನಿಮಾ ತಯಾರಿಸಿದರು. ಅಳೆದೂ ತೂಗಿ 12 ಕೋಟಿ ರೂಪಾಯಿ ಬಜೆಟ್‌ನಲ್ಲಿ ಮಾಡಿದ ಸಿನಿಮಾ ಒಂದೇ ವಾರದಲ್ಲಿ 30 ಕೋಟಿ ರೂಪಾಯಿಗೂ ಹೆಚ್ಚು ಹಣ ತಂದಿತು.

ಚಿತ್ರಕ್ಕೆ ಒಂದೊಂದು ದೃಶ್ಯ ಬರೆದ ಮೇಲೂ ಒಂದು ವಾರ ಬ್ರೇಕ್ ತೆಗೆದುಕೊಳ್ಳುತ್ತಿದ್ದ ಸಂದೀಪ್ ಮನೆಯ ಕಾಲಿಂಗ್ ಬೆಲ್ ಈಗ ಪದೇ ಪದೇ ಹೊಡೆದುಕೊಳ್ಳುತ್ತದೆ. ತಾರಾನಟರೆಲ್ಲ ಅವರಿಗೆ ಕಾಲ್‌ಷೀಟ್ ಕೊಡಲು ಈಗ ಮುಂದಾಗುತ್ತಿದ್ದಾರೆ. ಅಂದಹಾಗೆ, ಸಂದೀಪ್ ಮಗನ ಹೆಸರು ಅರ್ಜುನ್. ಸಿನಿಮಾಗೂ ಅದೇ ಹೆಸರನ್ನು ಇಟ್ಟಿದ್ದು ಅರ್ಥಪೂರ್ಣ. ಯಾಕೆಂದರೆ, ಅದೂ ಅವರ ಕೂಸೇ ಹೌದು.

ದೌರ್ಬಲ್ಯಗಳೂ ಇವೆ. ಶ್ರೀಮಂತ ಕುಟುಂಬದವನಾದರೂ ಓದಿನಲ್ಲಿ ಅವನಿಗೆ ಶಿಸ್ತಿದೆ. ಪ್ರೀತಿಸಿದ ಹುಡುಗಿಯ ಭವಿಷ್ಯದ ಕುರಿತೂ ಕಾಳಜಿ ಇದೆ. ಅವಳೂ ಓದಿ ವೈದ್ಯೆಯಾಗಬೇಕು ಎಂಬ ಕಳಕಳಿಯಿಂದ ತಾನೇ ಪಾಠ ಕೂಡ ಹೇಳಿಕೊಡುತ್ತಾನೆ. ಎಲ್ಲವನ್ನೂ ಬದ್ಧತೆಯಿಂದ ಮಾಡುವ ಅವನಿಗೆ ಕೋಪ ಬಂದರೆ ಮುಗಿಯಿತು. ಬೋಧನೆ, ಕಿತ್ತಾಟ, ರಮಿಸುವುದು, ಕಾಳಜಿ ಮಾಡುವುದು, ವೃತ್ತಿ ಧರ್ಮ ಪಾಲನೆ ಎಲ್ಲದರಲ್ಲೂ ಅವನ ಉತ್ಕಟತೆ ಕಾಡುವಂಥದ್ದು. ಆದರೆ, 'ದೇವದಾಸ್' ಆಗುವ ಅವನು ಅದರಿಂದ ಆಚೆ ಬರಲಾಗದೆ, ಸಿಕ್ಕ ಸಿಕ್ಕ ಹೆಣ್ಣುಗಳಲ್ಲೆಲ್ಲ ಭಗ್ನಪ್ರೇಮ ಕಥಾ ಕಾಲಕ್ಷೇಪ ಮಾಡುವ ಪರಿಯಲ್ಲಿ ಒಂದಿಷ್ಟು ಗೋಜಲುಗಳಿವೆ. ಅವನು ಸ್ತ್ರೀಲೋಲನೋ, ಕಾಮುಕನೋ, ಎರಡೂ ಆಗಲಾಗದ ಸಂದಿಗ್ಧನೋ ಸ್ಪಷ್ಟವಾಗಿ ಗೊತ್ತಾಗದ ಸನ್ನಿವೇಶಗಳೂ ಇವೆ. ನಿರ್ದೇಶಕರು ಪ್ರಜ್ಞಾಪೂರ್ವಕವಾಗಿಯೇ ಈ ರೀತಿ ದೃಶ್ಯಗಳನ್ನು ಕಟ್ಟಿರಲಿಕ್ಕೆ ಸಾಕು.